ಓ.ಎಸ್ ನಂ. 355/2019

ಪಿ. ಡಬ್ಲ್ಯೂಃ 1

ಸಾಕ್ಷಿಗೆ ಪ್ರಮಾಣ ವಚನವನ್ನು ದಿಃ 22-07-2025 ರಂದು ಬೊಧಿಸಲಾಯಿತು.

ಮುಂದುವರಿದ ಪಾಟೀ ಸವಾಲು ಃ ಶ್ರೀ ಎಸ್ ಆರ್ ಬಿ ನ್ಯಾಯವಾದಿರವರಿಂದಃ

ನನ್ನ ತಂದೆಯವರು ಪೋಲೀಸ ಇಲಾಖೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದು , ಹುಬ್ಬಳ್ಳಿ , ಕಲಘಟಗಿ , ಧಾವಾರವಾಡ ಇನ್ನಿತರ ಕಡೆಗಳಲ್ಲಿ ಸೇವೆಯನ್ನು ಸಲ್ಲಿಸಿ ನಿವೃತ್ತಿ ಆಗಿದ್ದು, ಅವರು ಸೇವೆಯಲ್ಲಿದ್ದ ಸಮಯದಲ್ಲಿ ನಾವು ಅವರ ಜೊತೆ ವಾಸಮಾಡುತ್ತಿದ್ದೆವು. 1992 ನೇ ಇಸವಿಯಲ್ಲಿ ನನ್ನ ತಂದೆಯವರು ನೌಕರಿಯಲ್ಲಿದ್ದಾಗ ಪ್ರತಿವಾದಿಗೆ ಮದುವೆ ಆಗಿರುತ್ತದೆ. ನನ್ನ ತಂದೆಯವರಿಗೆ ಹಳಗಾದಲ್ಲಿ ಮಾತ್ರ ಸ್ವಂತ ಜಮೀನು ಇತ್ತು. ಭೈರಾ ಗ್ರಾಮದಲ್ಲಿದ್ದ ಜಮೀನನ್ನು ನನ್ನ ತಂದೆಯವರುಖರೀದಿ ಮಾಡಿರುತ್ತಾರೆಂದರೆ ಸರಿಯಲ್ಲ , ಸಾಕ್ಷಿ ಸ್ವತಃ ನನ್ನ ಹೆಸರಿನಲ್ಲಿ ಖರೀದಿ ಮಾಡಿರುತ್ತೇನೆಂದು ಸಾಕ್ಷ್ಯ ನುಡಿಯುತ್ತಾರೆ. ಸದರಿ ಜಮೀನು ಮೂಲತಃ ಭೂನ್ಯಾಯಮಂಡಳಿಯಿಂದ ಮಂಜೂರಾಗಿರುತ್ತದೆಂದು ಸಾಕ್ಷಿಯು ಮುಂದುವರಿದು ಸಾಕ್ಷ್ಯ ನುಡಿಯುತ್ತಾರೆ. ಭೈರಾ ಗ್ರಾಮದಲ್ಲಿದ್ದ ಜಮೀನನ್ನು ನನ್ನ ತಂದೆಯವರು ಖರೀದಿ ಮಾಡಿರುವುದಿಲ್ಲಾ , ನಾನೇ ಅವರ ಹೆಸರಿಗೆ ವರ್ಗಾವಣೆ ಮಾಡಿರುತ್ತೇನೆ. ನನ್ನ ತಂದೆಯ ಜೀವಿತಾವಧಿಯಲ್ಲಿ ಪ್ರತಿವಾದಿಗೆ ಯಾವುದೇ ಪಾಲು ನೀಡಿರುವುದಿಲ್ಲಾ ಎಂದರೆ ಸರಿ. ಸಾಕ್ಷಿಯು ಸ್ವತಃ ಮದುವೆಯ ಕಾಲಕ್ಕೆ ಪ್ರತಿವಾದಿಗೆ ತಮ್ಮ ಕುಟುಂಬದ ಆಸ್ತಿಗಳಲ್ಲಿ ಪಾಲುನೀಡುವ ಬದಲು ಆಕೆಯ ಪಾಲನ್ನು ಬೆಳ್ಳಿ ಬಂಗಾರ ಹಾಗೂ ನಗದು ರೂಪದಲ್ಲಿ ನೀಡಲಾಗಿರುತ್ತದೆಂದು ಸಾಕ್ಷ್ಯ ನುಡಿಯುತ್ತಾರೆ. ಆ ಬಗ್ಗೆ ಯಾವುದೇ ಕರಾರು ಮಾಡಿರುವುದಿಲ್ಲಾ ಎಂದರೆ ಸರಿ ಮತ್ತು ಈ ಬಗ್ಗೆ ವರದಿಯನ್ನು ಕಂದಾಯ ಇಲಾಖೆಗೆ ನೀಡಿರುವುದಿಲ್ಲಾ. ಪ್ರತಿವಾದಿಯು ತನ್ನ ಮದುವೆಯ ಕಾಲಕ್ಕೆ ದಾವಾ ಆಸ್ತಿಗಳಲ್ಲಿನ ಹಿಸ್ಸೆಯ ಬದಲಾಗಿ ನಗದು , ಬೆಳ್ಳಿ ಹಾಗೂಬಂಗಾರವನ್ನು ಪಡೆದಿರುವ ಬಗ್ಗೆ ಯಾವುದೇ ವರದಿಯನ್ನು ನಾವು ಮಾಡಿಕೊಂಡಿರುವುದಿಲ್ಲಾ. ನನ್ನ ತಂದೆಯವರು 1996 ನೇ ಸಾಲಿನಲ್ಲಿ ಸ್ವಯಂ ನಿವೃತ್ತಿಯನ್ನು ಪಡೆದುಕೊಂಡಿರುತ್ತಾರೆ. ನನ್ನ ತಂದೆಯವರಿಗೆ ನಿವೃತ್ತಿಯ ಕಾಲಕ್ಕೆ ಎಲ್ಲಾ ನಿವೃತ್ತಿ ಸೌಲಭ್ಯಗಳು ಮತ್ತು ಪಿಂಚಣಿಗಳು ನಗದು ರೂಪದಲ್ಲಿ ದೊರಕಿರುತ್ತವೆಂದರೆ ಸರಿ. ನನ್ನ ತಂದೆಯವರ ಎಲ್ಲಾ ವ್ಯವಹಾರ ಎಸ್ ಬಿ ಐ ಬ್ಯಾಂಕಿನಲ್ಲಿ ನಡೆಯುತ್ತಿತ್ತು ಎಂದರೆ ಸರಿ. ಆ ಸಮಯದಲ್ಲಿ ನಾನು ವ್ಯವಹಾರ ಮಾಡುತ್ತಿದ್ದೆನು ಎಂದರೆ ಸರಿಯಲ್ಲ, ನಾನು ಬೇರೆಯವರ ಹೊಟೇಲನಲ್ಲಿ ಕೆಲಸ ಮಾಡುತ್ತಿದ್ದೆನು ಎಂದು ಸಾಕ್ಷ್ಯನುಡಿಯುತ್ತಾರೆ.

ನನ್ನ ತಂದೆಯವರು ನಿವೃತ್ತಿಯ ಕಾಲದಲ್ಲಿ ತನಗೆ ದೊರಕಿದ ನಿವೃತ್ತಿ ವೇತನ, ಪಿಂಚಣಿ ಹಾಗೂ ಇನ್ನಿತರ ಹಣವನ್ನು ನನಗೆ ನೀಡಿರುತ್ತಾರೆಂದರೆ ಸರಿಯಲ್ಲ. ನನ್ನ ತಂದೆಯವರು ತೀರಿಕೊಂಡ ನಂತರ ನನ್ನ ತಾಯಿಗೆ ಪಿಂಚಣಿ ಬರುತ್ತಿತ್ತು ಎಂದರೆ ಸರಿ. ನಾನು ಮತ್ತು ತಾಯಿ ಆ ಸಮಯದಲ್ಲಿ ಜೊತೆಯಲ್ಲಿ ವಾಸವಾಗಿದ್ದೆವು ಎಂದರೆ ಸರಿ. ನನ್ನ ತಂದೆಯವರು ಮೃತರಾದ ನಂತರ ಅವರ ಹೆಸರಿನಲ್ಲಿದ್ದ ಜಮೀನು ವಾರಸಾ ಹಕ್ಕಿನಂತೆ ನನ್ನ ತಾಯಿ ಮತ್ತು ಮಕ್ಕಳಿಗೆ ಬಂದಿರುತ್ತದೆ ಎಂದರೆ ಸರಿ.

ನನ್ನ ತಾಯಿಯ ಹೆಸರಿನಲ್ಲಿ ಎಸ್ ಬಿ ಐ ಬ್ಯಾಂಕಿನಲ್ಲಿಟ್ಟಿದ್ದ ನಿಗದಿತ ಠೇವಣಿಯನ್ನು ನಾನೇ ಪಡೆದುಕೊಂಡಿರುತ್ತೇನೆಂದರೆ ಸರಿಯಲ್ಲ. ಸಾಕ್ಷಿಯು ಸ್ವತಃ ಪ್ರತಿವಾದಿಯೇ ಸದರಿ ಹಣವನ್ನು ಪಡೆದುಕೊಂಡಿರುತ್ತಾರೆಂದು ಸಾಕ್ಷ್ಯ ನುಡಿಯುತ್ತಾರೆ. ಸದರಿ ನಿಗದಿತ ಠೇವಣಿಗೆ ಸಂಬಂಧಪಟ್ಟ ಮೂಲ ದಾಖಲೆಗಳು ನನ್ನ ಬಳಿ ಇರುತ್ತದೆ ಎಂದರೆ ಸರಿಯಲ್ಲ . ಅದರ ನಕಲು ಪ್ರತಿಗಳು ಮಾತ್ರ ಪ್ರತಿವಾದಿಯಲ್ಲಿ ಇರುತ್ತದೆ ಎಂದರೆ ಸರಿಯಲ್ಲ. ಸಾಕ್ಷಿ ಸ್ವತಃ ಎಲ್ಲಾ ದಾಖಲೆಗಳು ಪ್ರತಿವಾದಿಯಲ್ಲಿದ್ದು , ಅವಳೇ ಬ್ಯಾಂಕಿನಿಂದ ಹಣವನ್ನು ಪಡೆದುಕೊಂಡಿರುತ್ತಾಳೆ , ಈ ಬಗ್ಗೆ ಬ್ಯಾಂಕಿನ ದಾಖಲೆಗಳನ್ನು ನೋಡಿದರೆ ಗೊತ್ತಾಗುತ್ತದೆಂದು ಸಾಕ್ಷ್ಯ ನುಡಿಯುತ್ತಾರೆ. ಎಸ್ ಬಿ ಐ ಬ್ಯಾಂಕಿನಲ್ಲಿ ಇಟ್ಟಿದ್ದ ನಿಗದಿತ ಠೇವಣಿಯ ಬಗ್ಗೆ ನನಗೆ ಮಾಹಿತಿ ಇಲ್ಲಾ . ಕೆನರಾ ಬ್ಯಾಂಕಿನಲ್ಲಿ ಇಟ್ಟಿದ್ದ ನಿಗದಿತ ಠೇವಣಿಯನ್ನು ಪ್ರತಿವಾದಿ ಪಡೆದುಕೊಂಡಿರುತ್ತಾರೆಂದು ಸಾಕ್ಷ್ಯ ನುಡಿಯುತ್ತಾರೆ. ಎಸ್ ಬಿ ಐ ಬ್ಯಾಂಕಿನ ದಾಖಲೆಗಳನ್ನು ನನಗೆ ನ್ಯಾಯಾಲಯದಲ್ಲಿ ಹಾಜರು ಪಡಿಸಲು ಯಾವುದೇ ತೊಂದರೆ ಇಲ್ಲಾ ಎಂದರೆ ಸರಿ. ಸಾಕ್ಷಿ ಸ್ವತಃ ಖಾತೆ ಸಂಖ್ಯೆ ಗೊತ್ತಾದರೆ ಹಾಜರುಪಡಿಸಬಲ್ಲೆ ಎಂದು ಸಾಕ್ಷ ನುಡಿಯುತ್ತಾರೆ. ಈ ಬಗ್ಗೆ ನಾನು ಜೆರಾಕ್ಸ ಪ್ರತಿಗಳನ್ನು ಹಾಜರು ಪಡಿಸಿರುತ್ತೇನೆ ಎಂದರೆ ಸರಿಯಲ್ಲ. ಪ್ರತಿವಾದಿಗೆ ಏನನ್ನೂ ತಿಳಿಸದೇ ಮೋಸದಿಂದ ಕಾರವಾರ ತಾಲೂಕಿನ ಭೈರಾ ಗ್ರಾಮದಲ್ಲಿ ಒಂದು ಎಕರೆ ಜಮೀನನ್ನು ಮಾರಾಟ ಮಾಡಿರುತ್ತೇವೆ ಎಂದರೆ ಸರಿಯಲ್ಲ. ಸದರಿ ಜಮೀನನ್ನು ಮೋಸ ಮಾಡಿ ಮಾರಾಟ ಮಾಡಿದ ಬಗ್ಗೆ ನನ್ನ ವಿರುದ್ಧ ಪ್ರತಿವಾದಿಯು ಒಂದು ಕ್ರಿಮಿನಲ್ ಪ್ರಕರಣ ಹೂಡಿರುತ್ತಾರೆಂದರೆ ಸರಿಯಲ್ಲ. ಸದರಿ ಪ್ರಕರಣದಲ್ಲಿ ನನಗೆ ಶಿಕ್ಷೆಯಾಗಿರುತ್ತದೆ ಎಂದರೆ ಸರಿಯಲ್ಲ. ಇನ್ನೂವರೆಗೂ ನನ್ನ ಸಹೋದರಿಗೆ ಪಿತ್ರಾರ್ಜಿತ ಆಸ್ತಿಗಳಲ್ಲಿ ಯಾವುದೇ ಹಿಸ್ಸೆ ಕೊಟ್ಟಿರುವುದಿಲ್ಲಾ ಎಂದರೆ ಸರಿಯಲ್ಲ. ಸದರಿ ಜಮೀನನ್ನು ಒಂದುವರೆ ಲಕ್ಷ ರೂ.ಗೆ ಮಾರಾಟ ಮಾಡಿರುತ್ತೇವೆಂದರೆ ಸರಿಯಲ್ಲ. ಭೈರೆ ಗ್ರಾಮದ ಜಮೀನಿನಲ್ಲಿ ಪ್ರತಿವಾದಿಗೆ ನಾನು ಹಿಸ್ಸೆ ಕೊಡಲು ತಯಾರಿರುತ್ತೇನೆ ಆದರೆ ಪ್ರತಿವಾದಿಯು ತನ್ನ ತಾಯಿ ಹೇಳಿದಂತೆ

ಹಣವನ್ನು ಪಾವತಿ ಮಾಡಬೇಕೆಂದು ಸಾಕ್ಷ್ಯ ನುಡಿಯುತ್ತಾರೆ. ಸದರಿ ಜಮೀನನ್ನು ಮಾರಾಟ ಮಾಡಿ ಬಂದ ಹಣ ನಾನು ಖರ್ಚು ಮಾಡಿರುತ್ತೇನೆ , ನನ್ನ ತಾಯಿ ತೆಗೆದುಕೊಂಡಿರುವುದಿಲ್ಲಾ ಎಂದರೆ ಸರಿಯಲ್ಲ. ನನ್ನ ಸಹೋದರಿಯ ಗಂಡ ಆಕೆಯ ಜೊತೆ ಇರುವುದಿಲ್ಲಾ ಎಂದರೆ ಸರಿಯಲ್ಲ. ಅವಳು ಇಬ್ಬರು ಮಕ್ಕಳನ್ನು ಸಾಕಿಕೊಂಡು ಬೇರೆಯವರ ಮನೆಯಲ್ಲಿ ಕೂಲಿ ಕೆಲಸ ಮಾಡಿಕೊಂಡು ಜೀವನ ಸಾಗಿಸುತ್ತಿದ್ದಾರೆ ಎಂದರೆ ಸರಿಯಲ್ಲ. ಪ್ರತಿವಾದಿಯನ್ನು ಆಕೆಯ ಗಂಡ ನಿರ್ಲಕ್ಷ ಮಾಡಿದುದರಿಂದ ಆಕೆ ತನ್ನ ಗಂಡನ ವಿರುದ್ಧ ಪ್ರಕರಣವನ್ನು ಹೂಡಿರುತ್ತಾಳೆ ಎಂದರೆ ಸರಿಯಲ್ಲ. ಈ ದಾವೆಯಲ್ಲಿ ಕೇಳಿದ ಪರಿಹಾರಕ್ಕೆ ನಾನು ಅರ್ಹನಿರುವುದಿಲ್ಲಾ ಬದಲಾಗಿ ದಾವೆಯಲ್ಲಿ ಕಾಣಿಸಿದ ಎಲ್ಲಾ ಮೊತ್ತವು ಪ್ರತಿವಾದಿಗೇ ಸೇರಬೇಕಾಗುತ್ತದೆಂದರೆ ಸರಿಯಲ್ಲ ಮತ್ತು ಸದರಿ ಹಣವು ಆಕೆಗೆ ಸೇರಬೇಕೆಂದು ನಮ್ಮ ಕುಟುಂಬದಲ್ಲಿ ಮಾತುಕತೆ ಆಗಿತ್ತೆಂದರೆ ಸರಿಯಲ್ಲ. ಎಸ್ ಬಿ ಐ ಬ್ಯಾಂಕಿನ ಸ್ಟೇಟಮೆಂಟ ತಂದು ಹಾಜರು ಪಡಿಸಿದರೆ ನಾನು ಹಣವನ್ನು ತಿಂದಿರುವುದು ಗೊತ್ತಾಗುತ್ತದೆ ಎಂದರೆ ಸರಿಯಲ್ಲ. ನಾನು ಈ ದಾವೆಯಲ್ಲಿ ಕೋರಿದ ಪರಿಹಾರಕ್ಕೆ ಅರ್ಹನಿರುವುದಿಲ್ಲಾ ಮತ್ತು ಈ ದಾವೆ ಊರ್ಜಿತವಾಗುವುದಿಲ್ಲಾ ಎಂದರೆ ಸರಿಯಲ್ಲ.

**ಮರು ವಿಚಾರಣೆಃ - ಇಲ್ಲ -**

**(ನನ್ನ ಹೇಳಿಕೆ ಪ್ರಕಾರ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)**

**ಓ.ಹೇ.ಕೇ. ಸರಿ ಇದೆ,**

**ಸಿವಿಲ್ ನ್ಯಾಯಾಧೀಶರು ಕಾರವಾರ**